# ಕೆರೆಗಳ ಅಭಿವೃದ್ಧಿಯಿಂದ ಅಂತರ್ಜಲ ವೃದ್ಧಿ

ಒತ್ತುವರಿ, ರಾಜಕಾಲುವೆ, ಕೈಗಾರಿಕೆಗಳ ಕಲ್ಮಶಗಳು ಸೇರಿ ವಿನಾಶದಂಚಿನಲ್ಲಿರುವ ಬೆಂಗಳೂರಿನ ಕೆರೆಗಳ ಉಳಿವಿಗೆ ಸರ್ಕಾರಿ ಸಂಸ್ಥೆಗಳ ಜತೆ ಕೈಗಾರಿಕೋದ್ಯಮಿಗಳ ಜತೆ ಸ್ವಯಂಸೇವಾ ಸಂಸ್ಥೆಗಳು ಕೈಜೋಡಿಸಬೇಕು ಎಂಬ ಅಭಿಪ್ರಾಯವು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ವ್ಯಕ್ತವಾಯಿತು.

ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಕೆಆರ್‌ಎಸ್ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯಗಳಿಂದ ಪೂರೈಸುತ್ತಿರುವ ನೀರಿನ ಪ್ರಮಾಣ ಸಾಕಾಗುತ್ತಿಲ್ಲ. ನೀರಿನ ಸಮಸ್ಯೆ ನೀಗಿಸಬೇಕೆಂದರೆ ಒತ್ತುವರಿ ಹಾಗೂ ತ್ಯಾಜ್ಯಗಳು ಸೇರಿ ಹಾಳಾಗುತ್ತಿರುವ ಬೆಂಗಳೂರಿನ ಕೆರೆಗಳನ್ನು ಅಭಿವೃದ್ಧಿಪಡಿಸಬೇಕು. ಕೆರೆಗಳನ್ನು ರಕ್ಷಿಸುವುದರಿಂದ ನೀರಿನ ಸಮಸ್ಯೆ ನೀಗುವುದರ ಜತೆ ಅಂತರ್ಜಲದ ಪ್ರಮಾಣ ಸಹ ಹೆಚ್ಚಾಗುತ್ತದೆ. ಇದರಿಂದ ಬೇಸಿಗೆಯಲ್ಲಿ ನೀರಿಗಾಗಿ ಪರಿತಪಿಸುವ ದಿನಗಳು ದೂರವಾಗಲಿವೆ ಎಂಬ ಅಭಿಪ್ರಾಯವು ಈ ಕಾರ್ಯಾಗಾರದಲ್ಲಿ ಮೂಡಿಬಂತು.

ನಗರದ ಕೆರೆಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೆರೆ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಜಲಮಂಡಳಿ, ಬಿಡಿಎ ಹಾಗೂ ಬಿಬಿಎಂಪಿ ನಗರದ ಕೆಲವು ಕೆರೆಗಳನ್ನು ಪುನರ್‌ನವೀಕರಣಗೊಳಿಸಲಾಗಿದೆ. ವಿಪರೀತ ತ್ಯಾಜ್ಯ ಸೇರಿರುವ ನಗರದ ಹಲವು ಕೆರೆಗಳು ಪುನಃ ದುರಸ್ಥಿಪಡಿಸಲಾಗದ ಸ್ಥಿತಿಗೆ ತಲುಪಿವೆ. ಈ ನಿಟ್ಟಿನಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರಕಾರಿ ಸಂಸ್ಥೆಗಳ ಜತೆ ಕೈಗಾರಿಕೋದ್ಯಮಿಗಳು ಆರ್ಥಿಕ ಸಹಾಯದ ನೀಡಬೇಕು; ಜೊತೆಗೇ ಸರ್ಕಾರ ವಿಧಿಸಿರುವ ಮುನ್ನೆಚ್ಚರಿಕೆ ಕ್ರಮಗಳನ್ನೂ ಅನುಸರಿಸಬೇಕು ಎಂಬ ಮಾರ್ಗ ಸೂಚಿಯನ್ನು ಕಾರ್ಯಾಗಾರದಲ್ಲಿ ವ್ಯಕ್ತಪಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಡಾ. ವಾಮನ ಆಚಾರ್ಯ, 'ಒಂದು ಕಾಲದಲ್ಲಿ ಬೆಂಗಳೂರಿನ ಕುಡಿಯುವ ನೀರಿಗೆ ಕೆರೆಗಳೇ ಪ್ರಮುಖ ಆಧಾರವಾಗಿದ್ದವು. ಆದರೆ ಈಗ ಇಲ್ಲಿನ ಕೆರೆಯ ನೀರನ್ನು ಕುಡಿಯುವುದಿರಲಿ, ಬೇರೆ ಕೆಲಸಗಳಿಗೆ ಬಳಸುವುದಕ್ಕೂ ಸಾಧ್ಯವಾಗುತ್ತಿಲ್ಲ. ಕೆರೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹ ನಗರದ ನಾನಾಕಡೆ ಹಲವು ಕ್ರಮಗಳನ್ನು ಕೈಗೊಂಡಿದೆ. ವ್ಯರ್ಥವಾಗಿ ಹರಿಯುವ ಹೆಚ್ಚು ಹಾನಿಕರವಲ್ಲದ ಕಲುಷಿತ ನೀರನ್ನು ಶೋಧಿಸುವ ಮೂಲಕ (ಫಿಲ್ಟರ್) ಮಾಡುವ ಮೂಲಕ ಕುಡಿಯುವುದಕ್ಕೆ ಬಳಸಿಕೊಳ್ಳುವ ತಂತ್ರಜ್ಞಾನ ಹೆಚ್ಚಾಗಬೇಕಿದೆ. ಈ ನಿಟ್ಟಿನಲ್ಲಿ ದೇವನಹಳ್ಳಿಯ 'ಬಿಸ್ಲೇರಿ' ಕಂಪನಿಯ ಪಾತ್ರ ಮಹತ್ವದ್ದಾಗಿದೆ' ಎಂದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್, 'ತೀವ್ರಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರಿಗೆ ಕಾವೇರಿ ನೀರು ಸಾಲುತ್ತಿಲ್ಲ. ಅಂತರ್ಜಲ ಮಟ್ಟವೂ ಕುಸಿಯುತ್ತಿದೆ. ಸದ್ಯಕ್ಕೆ ಬೆಂಗಳೂರಿನ ಜನತೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಳ್ಳುವ ಪ್ರಮುಖ ಮಾರ್ಗ ಕೆರೆಗಳ ರಕ್ಷಣೆಯೊಂದೇ ಆಗಿದೆ' ಎಂದು ತಿಳಿಸಿದರು.

ರಾಜ್ಯ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅಧ್ಯಕ್ಷ ಸಿ.ಎಸ್. ಕೇದಾರ್, ಬೆಂಗಳೂರು ಜಲಮಂಡಳಿಯ ಆಯುಕ್ತ ಗೌರವ್ ಗುಪ್ತ, ಕೆರೆ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯ

ನಿರ್ವಹಣಾಧಿಕಾರಿ ರವಿ ರಾಲ್ಫ್, ವಿಶ್ವ ಬ್ಯಾಂಕಿನ ವಲಯ ಅಧಿಕಾರಿ ಮಿಂಗ್‌ಜಾಂಗ್ ಕಾರ್ಯಾಗಾರದಲ್ಲಿ ಕೆರೆಗಳ ಬಗ್ಗೆ ವಿಷಯ ಮಂಡಿಸಿದರು.

ಪರಿಸರ ನಿರ್ವಹಣೆ ಮತ್ತು ವಿಮಾ ಸಂಶೋಧನೆ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ, ಸಣ್ಣ ನೀರಾವರಿ ಇಲಾಖೆ, ಸೇರಿದಂತೆ ಹಲವು ಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.